**ದಿನಾಂಕಃ 06/09/2025 ರಂದು ಅಸಾಃ ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ ಮಾನ ಸ.ಅ. ರವರಿಂದಃ

ಆರೋಪಿತರು ನನಗೆ ಗೊತ್ತು. ಅವರು ನಮ್ಮ ಗ್ರಾಮದವರು. ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ. ನಾನು ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ/ಬರುವುದಿಲ್ಲ.

2. ಆರೋಪಿತರು ನನಗೆ ಗೊತ್ತಿಲ್ಲ. ಅವರು ಯಾವ ಊರಿನವರು ಗೊತ್ತಿಲ್ಲ ಹಾಗೂ ಅವರು ಯಾವ ಜಾತಿಯ ಸದಸ್ಯರು ಗೊತ್ತಿಲ್ಲ. ನಾನು ಆದಿ ಕರ್ನಾಟಕ ಪರಿಶಿಷ್ಟ ಜಾತಿಯ ಸದಸ್ಯನಿರುತ್ತೇನೆ.

ಆರೋಪಿತರಿಗೂ ನನಗೂ ಚಾಸಾ- ರವರಿಗೂ ಯಾವುದೇ ಗಲಾಟೆ ನಡೆದಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈಯಿಂದ ಹಾಗೂ ದೊಣ್ಣೆಯಿಂದ ಹಲ್ಲೆ ಮಾಡಿಲ್ಲ, ಜಾತಿ ನಿಂದನೆ ಮಾಡಿಲ್ಲ. ಪೊಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

2.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3. ದೂರು ಕೊಟ್ಟ ನಂತರ ಪೊಲೀಸರು ಸ್ಥಳಕ್ಕೆ ಬಂದು, ಮಹಜರ್ ಮಾಡಿರುತ್ತಾರೆ, ಅದಕ್ಕೂ ಕೂಡ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಮಹಜರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರ್ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.s ಪೊಟೋ ಕೂಡ ತೆಗೆದಿರುತ್ತಾರೆ. ಸಾಕ್ಷಿಯು ಕಲ್ಲನ್ನು ನೋಡಿ ಗುರುತಿಸಿದ್ದು, ಕಲ್ಲನ್ನು ಮುಮಾ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸ.ಅ, ರವರು ಬಣ್ಣದ ಪೊಟೋ ಮತ್ತು ಸಿಡಿಯನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಸಿಡಿಯನ್ನು ಬೆರಳಚ್ಚುಗಾರರ ಮುಖಾಂತರ ಹಾಕಿ

ನೋಡಿದಾಗ ಅದು ವಿಡಿಯೋ ಸಿಡಿ ಇದ್ದು, ಪೋಟೋ ಇಮೇಜಸ್ ಗಳು ಇರುವುದಿಲ್ಲ. ಬಣ್ಣದ ಪೊಟೋ ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ, ಆದ್ದರಿಂದ ಸಾಕ್ಷ್ಯ ಅಧಿನಿಯಮದ ಪ್ರಕಾರ ಸಿಡಿ ಮತ್ತು ಪ್ರಮಾಣ ಪತ್ರ ಕೊಡದೇ ಇರುವುದರಿಂದ, ಬಣ್ಣದ ಪೊಟೋಗಳನ್ನು ಗುರುತಿಸಬೇಕೆಂಬ ಮಾನ್ಯ ಸ.ಅ. ರವರ ಮನವಿಯನ್ನು ತಳ್ಳಿಹಾಕಲಾಯಿತು)

ಈ ಹಂತದಲ್ಲಿ ಮಾನ್ಯ ಸ.ಅ. ರವರು ಪೊಟೋಗಳನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ತನಿಖಾಧಿಕಾರಿ ಬಣ್ಣದ ಫೋಟೋ ಜೊತೆ ಸಿಡಿ, ಪೆನ್ ಡ್ರೈ ಅಥವಾ ನೆಗೆಟಿವ್ ಹಾಜರು ಮಾಡಿಲ್ಲ. ಆದ್ದರಿಂದ ಬಣ್ಣದ ಪೋಟೋಗಳು ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ. ಮಾನ್ಯ ಸ.ಅ ರವರ ಪೋಟೋ ಗುರುತು ಮಾಡುವ ಮನವಿಯನ್ನು ತಳ್ಳಿ ಹಾಕಲಾಯಿತು.)

ಸಾಕ್ಷಿಯು ತನ್ನ ಮತ್ತು ಇತರರ ಇರುವಿಕೆಯನ್ನು ಬಣ್ಣದ ಪೊಟೋದಲ್ಲಿ ನೋಡಿ ಗುರುತಿಸಿರುತ್ತಾರೆ. ತನಿಖಾಧಿಕಾರಿ ಪೊಟೋ ಜೊತೆ ಸಿಡಿ ಹಾಜರುಪಡಿಸಿರುತ್ತಾರೆ. ಸಿಡಿ ನಿಪಿ-3, ಒಂದು ಬಣ್ಣದ ಪೊಟೋ ನಿಪಿ-4 ಎಂದು ಗುರುತಿಸಲಾಯಿತು.

ಆರೋಪಿತರಿಗೆ ನಮ್ಮದು ಯಾವುದು ಜಾತಿ ಎಂದು ಗೊತ್ತಿದೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(** ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ**,** ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು**)**

ಪಾಟೀ ಸವಾಲು ಮಾನ್ಯ ಎಸ್ ಪಿ ಪಿ ರವರಿಂದಃ

ದಿ.

ನಿಪಿ-**4** ವಿಷಯ ಗೊತ್ತಿದ್ದರೂ ಆರೋಪಿತರ ಜೊತೆ ರಾಜಿ ಮಾಡಿಕೊಂಡು**,** ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ**.** ನಮಗೆ ಯಾರೂ ಒತ್ತಾಯ ಮಾಡಿಲ್ಲ**,** ಪ್ರಭಾವ ಬೀರಿಲ್ಲ**,** ನಾನು ಸ್ವತಃ ಸಾಕ್ಷಿ ನುಡಿಯುತ್ತಿದ್ದೇನೆ**.**

## ಪಾಟೀ ಸವಾಲುಃ ಆರೋಪಿತರ ಪರ ಶ್ರೀ/ಶ್ರೀಮತಿ ವಕೀಲರಿಂದಃ

ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತಿಳಿಸಿರುತ್ತಾರೆ.

ಆರೋಪಿತರ ಪರ ವಕೀಲರು ಗೈರು ಹಾಜರು. ಯಾವುದೇ ಮನವಿ ಪ್ರಾರ್ಥನೆ ಇಲ್ಲ. ಆರೋಪಿತರು ಈ ಸಾಕ್ಷಿಗೆ ಪಾಟೀ ಸವಾಲು ಮಾಡಲು ತಯಾರಿರುವುದಿಲ್ಲ. ಆದ್ದರಿಂದ ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಆರೋಪಿ ಪರ ಪಾಟೀ ಸವಾಲು ಮಾಡಲು ಸಮಯ ಕೇಳಿದ್ದು, ರೂ. ಖರ್ಚಿನೊಂದಿಗೆ ಆದೇಶ ಮಾಡಿ ಸಮಯ ನೀಡಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ